**ECA No: 04 /2022**
**C/W ECA No 02/2022**
**ECA No: 03/2022**
**ಪಿ.ಡಬ್ಲ್ಯೂ:3, ಸುಭಾಷ**

ದಿನಾಂಕ :21-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಬಿ ಎಸ್ ಕೆ ವಕೀಲರಿಂದ

ನಾನು ವಿಧ್ಯಾಭ್ಯಾಸ ಮಾಡಿಲ್ಲಾ. ನನ್ನ ಆಧಾರ ಕಾರ್ಡನಲ್ಲಿ ಜನ್ಮ ದಿನಾಂಕ: 1-6-1988 ಎಂದು ಬರೆದಿರುವುದು ಸರಿ ಇರುತ್ತದೆ. ಅನೀಲಕುಮಾರ ಲಾರಿ ಚಾಲಕ. ಲಾರಿ ನಂಬರ ಕೆಎ-56-3748. ಅದರ ಮಾಲಿಕರು ಶಂಕರ ಅವರು ಬಸವಕಲ್ಯಾಣದವರು. ನಾನು ಅವರ ಬಳಿ ಅಪಘಾತಕ್ಕಿಂತ ಮೊದಲು 2-3 ವರ್ಷದಿಂದ ಕೆಲಸ ಮಾಡುತ್ತಿದ್ದೆ. ನಾನು ಕೆಲಸಕ್ಕೆ ಸೇರಿದಾಗ ರೂ. 15 ಸಾವಿರ ಸಂಬಳ ಕೊಡುತ್ತಿದ್ದರು. ಸಂಬಳವನ್ನು ನಗದು ರೂಪದಲ್ಲಿ ಕೊಡುತ್ತಿದ್ದರು. 1 ನೇ ಎದುರದಾರರು ಸಂಬಳ ಕೊಡುತ್ತಿದ್ದ ಬಗ್ಗೆ ಅವರಿಂದ ದಾಖಲೆ ಪಡೆದು ಹಾಜರು ಪಡಿಸಿಲ್ಲಾ. ನಾನು ಅವರ ಬಳಿ ಕ್ಲೀನರ ಆಗಿ ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಹೇಳಿದ್ದೆನೆ ಅಂದರೆ ಸರಿಯಲ್ಲ . ನನಗೆ ತಿಂಗಳಿಗೆ ರೂ. 20 ಸಾವಿರ ಸಂಬಳ ಮತ್ತು 300 ರೂ. ಭತ್ಯೆ ಕೊಡುತ್ತಿದ್ದರು ಎಂಧು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತವು ಚಾಂಗಲೇರಿ ಘಾಟನಲ್ಲಿ ಆಗಿರುತ್ತದೆ. ಲಾರಿಯಲ್ಲಿ ವೈಯರ್ ಬಂಡಲ್ ಸಾಗಿಸುತ್ತಿದ್ದೇವು. ಅನೀಲ ಇವರು ನನಗಿಂತ ಮೊದಲು 1 ನೇ ಎದುರದಾರರ ಹತ್ತಿರ ಕೆಲಸ ಮಾಡುತ್ತಿದ್ದರು. ಆ ದಿನ ನಾನು ಕ್ಲೀನರ್ ಆಗಿ ಲಾರಿಯಲ್ಲಿ ಹೋಗುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಅಪಘಾತದ ನಂತರ ಅಂಬುಲೆನ್ಸಲ್ಲಿ ಕಲಬುರಿಗಯ ಮಣೂರ ಆಸ್ಪತ್ರೆಯಲ್ಲಿ ದಾಖಲೆ ಮಾಡಿರುತ್ತಾರೆ. ಅಲ್ಲಿ 2-3 ದಿನ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಬಲಗೈಗೆ ಗಾಯ ಆಗಿತ್ತು. ನನಗೆ ಗಾಯ ವಾಸಿಯಾಗಿದ್ದು, ಯಾವುದೇ ಅಂಗ ನೂನ್ಯತೆ ಇಲ್ಲಾ ಎನ್ನುವುದು ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎಂದು ವೈದ್ಯರಿಂದ ಸುಳ್ಳು ಪ್ರಮಾಣ ಪತ್ರ ಪಡೆದಿರುತ್ತೆನೆ ಅಂದರೆ ಸರಿಯಲ್ಲ. ನನಗೆ ಈಗ ಕ್ಲೀನರ್ ಕಲಸ ಮಾಡಲು ಆಗುತ್ತಿಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರೂ. 3.50 ಲಕ್ಷ ಚಿಕಿತ್ಸಗೆ ಖರ್ಚು ಆಗಿದ್ದು, ಇನ್ನು ರೂ. 1.50 ಲಕ್ಷ ಖರ್ಚು ಇದೆ ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ನನ್ನ ಹಾಗು 1 ನೇ ಎದುರುದಾರ ನಡುವೆ ಮಾಲಿಕ, ಕಾರ್ಮಿಕ ಸಂಬಂಧ ಇಲ್ಲಾ ಎನ್ನುವುದು ಸರಿಯಲ್ಲ. ಲಾರಿಯಲ್ಲಿ ಚಾಲಕ ಮತ್ತು ಇನ್ನೊಬ್ಬ ಕುರಲು ಮಾತ್ರ ವ್ಯವಸ್ಥೆ ಇರುತ್ತದೆ ಅಂದರೆ ಸರಿ ನಾನು ಲಾರಿ ಕ್ಲೀನರ್ ಆಗಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹಾಗೂ 1 ನೇ ಎದುರದುರಾರ ನಡುವೆ ಮಾಲಿಕ ಮತ್ತು ಕಾರ್ಮಿಕ ಸಂಬಂಧ

ಇಲ್ಲದ ಕಾರಣ ಪರಿಹಾರ ನೀಡಲು ಭಾಧ್ಯಸ್ಥ ಅಲ್ಲಾ ಅಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲಗಳನ್ನು ಸೃಷ್ಟಿಸಿ ಹಾಕಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ:ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.